ಹೊಸ ಆಸ್ಪತ್ರೆಯ ಬಗ್ಗೆ. ಮೂರ್ನಾಕು ವೈದ್ಯರುಗಳಿರುವ ಕಡೆ ಒಂದೆರಡು ಹುದ್ದೆ ಖಾಲಿ ಇದ್ದರೆ ಭರ್ತಿ ಮಾಡುತ್ತೀರಿ. ಆದರೆ ಅಲ್ಲಿ ಆಸ್ಪತ್ರೆ ಪ್ರಾರಂಭವಾಗಬೇಕು, ಯಾರಾದ ರೊಬ್ಬರು ವೈದ್ಯರನ್ನು ಅಲ್ಲಿ ಕೂಡಲೇ ಹಾಕಿಕೊಡುವ ವ್ಯವಸ್ಥೆ ಮಾಡಬೇಕು. ಆಸ್ಪತ್ರೆಯ ಕಟ್ಟಡವಾಗಿದೆ, ಎರಡು ವರ್ಷಗಳಿಂದ ವೈದ್ಯರನ್ನು ನೇಮಕ ಮಾಡಿಲ್ಲವೆಂದರೆ ಹೇಗೆ?

ಅಧ್ಯಕ್ಷರು :- ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳ ನೇಮಕಾತಿ ಮಾಡುತ್ತಿದ್ದಾರೆ, ಜೊತೆಗೆ ಕೆ.ಪಿ.ಎಸ್.ಸಿಯಿಂದ ನೇಮಕ ಮಾಡುತ್ತಿರುವುದಾಗಿ ಹೇಳಿದ್ದಾರೆ.

ಶ್ರೀ ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಹೊಸಪೇಟೆಯ ಆಸ್ಪತ್ರೆಯಲ್ಲಿ ಕ್ಷ-ಕಿರಣಯಂತ್ರ ಬಹಳ ದಿವಸಗಳಿಂದ ಕೆಟ್ಟು ಹೋಗಿದೆ. ಅದನ್ನು ರಿಪೇರಿ ಮಾಡಲು ಬೆಂಗಳೂರಿನಿಂದಲೇ ಬರಬೇಕೆಂದು ಹೇಳುತ್ತಾರೆ. ಒಂದು ವರ್ಷವಾಗಿದ್ದರೂ ರಿಪೇರಿಯಾಗಿಲ್ಲ.

ಅಧ್ಯಕ್ಷರು :- ಅದರ ಬಗ್ಗೆ ಅವರ ಹತ್ತಿರ ಮಾಹಿತಿ ಇರುವುದಿಲ್ಲ. ತಾವು ಪ್ರತ್ಯೇಕವಾಗಿ ಪ್ರಶ್ನೆ ಕೇಳಿ.

ಶ್ರೀ ಹೆಚ್. ಸಿ. ಮಹದೇವಪ್ಪ :- ಹೊಸಪೇಟೆಯ ಆಸ್ಪತ್ರೆಗೆ ನಾನು ರಾತ್ರಿ ಪಂಚೆ ಉಟ್ಟುಕೊಂಡು ಟವಲ್ ಕಟ್ಟಿಕೊಂಡು ಹೋಗಿದ್ದೇನೆ. ಮಾನ್ಯ ಸದಸ್ಯರಿಗೂ ಗೊತ್ತಿದೆ. ಅಲ್ಲೇನು ಕ್ಷ-ಕಿರಣ ಯಂತ್ರ ಕೆಟ್ಟುಹೋಗಿದೆ. ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ. ಪರಿಸ್ಥಿತಿಯೇನಿದೆ ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ :- ಅಧ್ಯಕ್ಷರೇ, ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ ಆಗಬಾರದು. ನಮ್ಮ ಕೊಡಗಿನ 1 ಕೋಟಿ 94 ಲಕ್ಷ ರೂಪಾಯಿ ನಷ್ಟವಾಗಬಾರದು ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು.

ವಿಷಯ :- ಪ್ರತಿ ಗ್ರಾಮಗಳಲ್ಲಿ ಗಾಂಧಿ ಭವನಗಳನ್ನು ಕಟ್ಟುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 208 (1396)

ಶ್ರೀ ಎಂ. ಚಂದ್ರಪ್ಪ (ಭರಮಸಾಗರ) :- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಬೇಡ್ಕರ್ ಮಾದರಿಯಲ್ಲಿ ಪ್ರತಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗಾಂಧಿ ಭವನಗಳನ್ನು ಕಟ್ಟುವ ಬಗ್ಗೆ ಸರ್ಕಾರದವರು ಯೋಚಿಸಿರುವರೇ?

ಆ) ಗಾಂಧಿ ಭವನ ಕಟ್ಟುವುದರಿಂದ ಹಳ್ಳಿಗಳಲ್ಲಿರುವ ಸಾರ್ವಜನಿಕರಿಗೆ ಸಭೆ ಸಮಾರಂಭಗಳನ್ನು ನಡೆಸಲು ಅನುಕೂಲವಾಗುತ್ತದೆ ಎಂಬುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :-

ಅ) ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಯೋಜನೆಯನ್ನು ರೂಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಹೌದು.

ಎಂ. ಚಂದ್ರಪ್ಪ :- ಮಾನ್ಯ ಅಧ್ಯಕ್ಷರೇ, ಅಂಬೇಡ್ಕರ್ ಭವನದ ರೀತಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗಾಂಧಿ ಭವನಗಳನ್ನು ಮಾಡಲೇಬೇಕು ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಸಮುದಾಯ ಭವನಗಳು ಕೊಟ್ಟಿದ್ದಾರೆ. ಅಂಬೇಡ್ಕರ್ ಭವನವನ್ನು ಗ್ರಾಮಾಂತರದಲ್ಲಿ ಕಟ್ಟಿರತಕ್ಕಂಥಾದ್ದು ಬಹಳ ಸ್ವಾಗತಾರ್ಹ ವಾದರೂ, ಇದು ಬರೀ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮಾತ್ರ ಮೀಸ ಲಾಗಿರತಕ್ಕ ಭವನ ಎಂಬ ಭಾವನೆ ಜನಗಳ ಮನಸ್ಸಿನಲ್ಲಿ ಬಂದಿರುವುದರಿಂದ, ಅಂಬೇ ಡ್ಕರ್ ಭವನದ ರೀತಿಯಲ್ಲಿಯೇ ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಪ್ರತಿ ಗ್ರಾಮ ಮಟ್ಟದಲ್ಲಿ ಒಂದು ಭವನವನ್ನು ಕಟ್ಟಿದರೆ, ಅದು ಬಹಳ ಒಳ್ಳೆಯದಾಗುತ್ತದೆ. ಎಲ್ಲಾ ಸಾರ್ವಜನಿಕರು ಇಂತಹ ಭವನಗಳಲ್ಲಿ ಸಭೆ, ಸಮಾರಂಭಗಳನ್ನು ನಡೆಸಲಿಕ್ಕೆ ಅನುಕೂಲ ಆಗುತ್ತದೆ. ಆದುದರಿಂದ ತಾವು ಈ ರೀತಿಯ ಭವನಗಳನ್ನು ಕಟ್ಟಿಸಿ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರವನ್ನೇ ನಾವು ಕೊಟ್ಟಿದ್ದೇವೆ. ಸಮುದಾಯ ಭವನಗಳನ್ನು ಕಟ್ಟಬೇಕು ಎನ್ನುವಂಥಾದ್ದೇ ಅವರ ಪ್ರಶ್ನೆಯ ಇಂಗಿತವಾಗಿರುತ್ತದೆ. ಅದಕ್ಕೆ ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಇಡಬೇಕೇ ಅಥವಾ ಬೇರೆಯವರ ಹೆಸರನ್ನೂ ಇಡಬೇಕೇ ಎನ್ನುವುದರ ಬಗ್ಗೆ ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ. ಆದರೆ ಸಮುದಾಯ ಭವನಗಳನ್ನು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಟ್ಟಲಿಕ್ಕೆ ಯೋಚನೆ ಮಾಡಿ, ಅದಕ್ಕೆ 10 ಲಕ್ಷ ರೂ. ಮೀರಲಾರದಂತಹ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಆ 10 ಲಕ್ಷ ರೂ. ಗಳಲ್ಲಿ, ಶೇಕಡ 25 ಭಾಗವನ್ನು ಗ್ರಾಮಸ್ಥರು ತಮ್ಮ ವಂತಿಕೆಯಾಗಿ ಕೊಡಬೇಕು, ಶೇಕಡ 25 ರಷ್ಟು ಭಾಗವನ್ನು ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಶೇಕಡ 80 ರಲ್ಲಿ ಕೊಡಬೇಕು.

ಅಧ್ಯಕ್ಷರು :- ಮಾನ್ಯ ಸದಸ್ಯರ ಭಾವನೆ ಬಹುಶಃ ಸಮುದಾಯ ಭವನ ಎಂದು ನೀವೇನು ಕೊಡುತ್ತೀರಿ, ಅದನ್ನು ಸಾಮಾನ್ಯವಾಗಿ ಎಸ್.ಸಿ. ಎಸ್.ಟಿ. ಕಾಲೋನಿ ಗಳಲ್ಲಿ ಕಟ್ಟುತ್ತಾರೆ, ಗ್ರಾಮದ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಗಾಂಧಿ ಭವನ ಎಂದು ಹೇಳಿ ಒಂದು ಕಟ್ಟಡವನ್ನು ಕಟ್ಟಿ ಎನ್ನತಕ್ಕಂಥದ್ದು ಅವರ ಪ್ರಶ್ನೆ. ಅಂದರೆ ಕಮ್ಯೂನಿಟಿ ಸೆಂಟರ್ಸ್ ನೀವು ಕೊಡತಕ್ಕದ್ದು ಕಾಲೋನೀಸ್‌ನಲ್ಲಿ ಇರಲಿ, ಅಲ್ಲಿ ಅವರೇ ಹೆಚ್ಚು ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸುತ್ತಾರೆ. ಇಡೀ ಸಮಾಜಕ್ಕೆ ಉಪಯೋಗ ವಾಗುವಂತೆ ಇನ್ನೊಂದು ಭವನವನ್ನು ಕಟ್ಟಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಸದಸ್ಯರು ತಮ್ಮ ಪ್ರಶ್ನೆಗೆ ಸರಿಯಾದ ಉತ್ತರ

ಬರಲಿಲ್ಲವೆಂದು ಹೇಳಿದರು. ಅಂಬೇಡ್ಕರ್ ಭವನವನ್ನು ಕಟ್ಟಿದಾಗ ಅದು ಒಂದು ಕಡೆಗೆ ಏನಾದರೂ ಆಗಬಹುದು ಆದ್ದರಿಂದ ಸಾಮೂಹಿಕವಾಗಿರಲೆಂದು ಒಂದು ಭವನವನ್ನು ಕಟ್ಟಿ ಎಂಬ ಆ ಪ್ರಶ್ನೆಯ ಆಶಯವನ್ನು ತಿಳಿದುಕೊಂಡೇ ನಾವು ಸಮುದಾಯ ಭವನವನ್ನು ಕಟ್ಟಬೇಕೆನ್ನುವಂತಹ ಕಾರಣಕ್ಕಾಗಿ, ಅವರೇನು ಬಯಸಿದಂತಹ ಆಸಕ್ತಿಗೆ ಅನುಗುಣವಾಗಿ, ಒಂದು ಯೋಜನೆಯನ್ನು ಈಗಾಗಲೇ ರೂಪಿಸಿದ್ದೇವೆ. ಅದಕ್ಕೆ ಮಾಹಾತ್ಮಾ ಗಾಂಧಿಯವರ ಹೆಸರನ್ನು ಇಡುವಂತಹದರ ಬಗ್ಗೆ ಸರ್ಕಾರ ಇನ್ನೂ ನಿರ್ಣಯ ಮಾಡಿಲ್ಲ. ಆದರೆ ಈ ಸಮುದಾಯ ಭವನವನ್ನು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಹತ್ತತ್ತು ಲಕ್ಷ ರೂ.ಗಳಿಗೆ, ಗರಿಷ್ಠ ಮಿತಿಯಲ್ಲಿ 10 ಲಕ್ಷ ರೂ. ಗಳನ್ನು ಮೀರದಂತೆ ಕಟ್ಟಬೇಕೆಂದು ಮಾಡಿದ್ದೇವೆ. ಅದರಲ್ಲಿ ಶೇಕಡ 25 ರಷ್ಟು ಭಾಗವನ್ನು, ಪಾಲ್ಗೊಳ್ಳುವಿಕೆಯ ಸಂಸ್ಕೃತಿ ಎಂದು ಹೇಳಿ ವಂತಿಕೆಯಿಂದ ಗ್ರಾಮಸ್ಥರು ಕೊಡಬೇಕಾಗಿದೆ. ಶೇಕಡಾ 25 ರಷ್ಟು ಭಾಗವನ್ನು ಗ್ರಾಮ ಪಂಚಾಯಿತಿಯವರು ಶೇಕಡ 80 ರ ಜೆ.ಆರ್.ವೈ.ನಲ್ಲಿ ಕೊಡಬೇಕು. ಶೇಕಡ 25 ರಷ್ಟು ಭಾಗವನ್ನು ತಾಲ್ಲೂಕು ಪಂಚಾಯಿತಿಯವರು ಕೊಡಬೇಕು. ಶೇಕಡ 25 ರಷ್ಟು ಭಾಗವನ್ನು ಸರ್ಕಾರದವರು ಕೊಡಬೇಕು ಎಂದು ಹೇಳಿ ಮಾಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸುವಂತಹ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ. ಈಗ ಆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಅಧ್ಯಕ್ಷರೇ, ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಕಟ್ಟಿಸುತ್ತೇನೆ ಎನ್ನತಕ್ಕಂಥ ಒಂದು ಭರವಸೆ ನನಗೆ ಬೇಕಾಗಿದೆ.

ಅಧ್ಯಕ್ಷರು :- ಮಾನ್ಯ ಸದಸ್ಯರು ಹೇಳಿದ ರೀತಿ ಮಾಡಿ, ಅದೊಂದು ಒಳ್ಳೆಯ ಸಲಹೆ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ಮಹಾತ್ಮಾ ಗಾಂಧಿಯವರಿಗಿಂತ ಯಾರೂ ದೊಡ್ಡವರಿಲ್ಲ. ಆಕಸ್ಮಾತ್ ಸಮುದಾಯ ಭವನವನ್ನು ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಇಡುವುದಾದರೆ, ಅದೊಂದು ಯೋಗ್ಯ ಸಲಹೆ, ಅದನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ.

ಶ್ರೀ ಅಮರೇಗೌಡ ಎಲ್. ಪಾಟೀಲ್ :- ಈಗ ಸಮುದಾಯ ಭವನ ಅಂತಂದರೆ ಈಗಾಗಲೇ ಗ್ರಾಮೀಣ ಪ್ರದೇಶದಲ್ಲಿ ಅದು ಪರಿಶಿಷ್ಟ ಪಂಗಡಕ್ಕೆ ಅಥವಾ ಪರಿಶಿಷ್ಟ ಜಾತಿಯವರಿಗೆ ಸೇರಿದಂತಹ ಒಂದು ಸಮುದಾಯ ಭವನ ಎಂದು ಹೇಳಿ ಎಲ್ಲರ ಕಲ್ಪನೆಯಲ್ಲಿ ಇದೆ. ಆ ಒಂದು ಭಾವನೆ ಜನತೆಯಿಂದ ಹೋಗಬೇಕಾದರೆ ಗಾಂಧಿಭವನ ಎಂದು ಹೆಸರಿಸುವುದು ಯೋಗ್ಯ ಎಂದು ಹೇಳಿ ನಾನು ಮಾನ್ಯ ಚಂದ್ರಪ್ಪನವರು ಹೇಳಿದ್ದಕ್ಕೆ ಬೆಂಬಲಿಸುತ್ತೇನೆ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ :- ಗಾಂಧಿ ಭವನ ಎಂದು ಈಗಾಗಲೇ ಇಲ್ಲಿದೆ, ಆದ್ದರಿಂದ ಗಾಂಧೀಜಿಯವರ ಹೆಸರನ್ನು ಸಮುದಾಯ ಭವನಗಳಿಗೆ ಇಡುವುದು ಅಷ್ಟೊಂದು ಸಮಂಜಸವೆನಿಸುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಹೆಸರು ಯಾವುದಾದರೂ ಇರಲಿ. ಮಾನ್ಯ ಮಂತ್ರಿಗಳು ಶೇಕಡ 25 ರಷ್ಟು ಪಂಚಾಯಿತಿಯವರು ಕೊಡಬೇಕು, ಶೇಕಡ 25 ರಷ್ಟು ಭಾಗ ಪಬ್ಲಿಕ್ ಕಾಂಟ್ರಿಬ್ಯೂಷನ್ ಇರಬೇಕೆಂದು ಹೇಳಿದರು. ಪಂಚಾಯಿತಿಗಳ ಆದಾಯವೇ ಒಂದು ಲಕ್ಷ ಇರುವಾಗ, ನೀವು ಭವನ ನಿರ್ಮಿಸಲು ಎರಡೂವರೆ ಲಕ್ಷ ಕಾಂಟ್ರಿಬ್ಯೂಷನ್‌ಅನ್ನು ಪಂಚಾಯಿತಿಯವರು ಕೊಡಬೇಕೆಂದು ಹೇಳಿದರೆ, ಬಹುಶಃ ಈ ಯೋಜನೆ ಆಗಲಿಕ್ಕೇ ಸಾಧ್ಯವಿಲ್ಲವೇನೋ ಎಂದು ನನಗನಿಸುತ್ತದೆ. ಅಂತಹ ಶ್ರೀಮಂತ ಪಂಚಾಯಿತಿಗಳು ನಮ್ಮ ರಾಜ್ಯದಲ್ಲಿ ಎಷ್ಟಿವೆ?

ಅಧ್ಯಕ್ಷರು :- ಮಾನ್ಯ ಆರಗ ಜ್ಞಾನೇಂದ್ರರವರೇ, ದಿನ ದಿನ ಕಳೆದಂತೆ ಹಳ್ಳಿಗಳಲ್ಲಿ ವಾತಾವರಣ ಏನಾಗುತ್ತದೆ ಅಂದರೆ, ನಾನೂ ನಿಮ್ಮಂತೆ ಗ್ರಾಮಾಂತರ ಪ್ರದೇಶದಿಂದ ಆರಿಸಿ ಬಂದವನು, ಎಲ್ಲಾ ಹೊರಗಡೆಯಿಂದ ತಂದು ಮಾಡಿದರೆ, ಲೋಕಲ್ ಜನರಿಗೆ ಇದು ನಮ್ಮದೊಂದು ಆಸ್ತಿ, ಇದನ್ನು ಕಾಪಾಡಿಕೊಳ್ಳಬೇಕು, ಎನ್ನತಕ್ಕಂಥ ಕನಿಷ್ಟ ಪ್ರಜ್ಞೆ ಕೂಡ ಇಲ್ಲ. ಮಿನಿ ಮಾಟರ್ ಸಪ್ಲೈ ಹಾಕಿದರೆ ಆ ಟ್ಯಾಪ್ಸ್ ಎಲ್ಲಾ ಮುರಿದು ಹಾಕುತ್ತಾರೆ. ಎನ್.ಆರ್.ಡಬ್ಲ್ಯೂ.ಎಸ್. ಇದ್ದರೆ ಆ ಟ್ಯಾಪ್ ಎಲ್ಲಾ ತೆಗೆದು ಹಾಕುತ್ತಾರೆ. ಜನರಿಗೆ ಅವರ ಪಾಲ್ಗೊಳ್ಳುವಿಕೆ ಇಲ್ಲದೇ ಇರುವುದರಿಂದ ಇದು ನಮಗಾಗಿ ಮಾಡಿರ ತಕ್ಕಾಂಥದ್ದು ಎನ್ನುವಂತಹ ಭಾವನೆ ಕೂಡ ಬಂದಿಲ್ಲ; ಆ ಭಾವನೆ ಮಾಯ ಆಗುತ್ತಾ ಆಗುತ್ತಾ, ಹಳ್ಳಿಗಳಲ್ಲಿ ನಾವು ಇವತ್ತು ಯಾವುದಾದರೂ ಕೆಲಸ ಮಾಡಿಸುವುದೇ ಬಹಳ ಕಷ್ಟವಾಗಿದೆ.

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ಪಬ್ಲಿಕ್‌ಗಳಿಂದ ಕಾಂಟ್ರಿಬ್ಯೂಷನ್ ಮಾಡುವುದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಶೇಕಡ 25 ರಷ್ಟು ಹಣವನ್ನು ಪಂಚಾಯಿತಿಯವರೇ ಕೊಡಬೇಕೆಂದರೆ, ಪಂಚಾಯಿತಿಗಳ ವಾರ್ಷಿಕ ಆದಾಯವೇ ಅಷ್ಟು ಇರುವುದಿಲ್ಲ. ಹೀಗಿರುವುದರಿಂದ ಎಷ್ಟು ಪಂಚಾಯಿತಿಗಳು ಇಡೀ ನಮ್ಮ ರಾಜ್ಯದಲ್ಲಿ ಈ ಯೋಜನೆಯನ್ನು ಉಪಯೋಗಿಸಿಕೊಳ್ಳುತ್ತವೆ ಎಂಬುದು ನನಗೆ ಅನುಮಾನ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ತಾವು ಪಾಲ್ಗೊಳ್ಳುವಿಕೆಯ ಸಂಸ್ಕೃತಿ ಬಗ್ಗೆ ಮಾತನಾಡಿದ್ದಕ್ಕಾಗಿ ಬಹಳ ಧನ್ಯವಾದಗಳು. ಇಂತಹ ಅಭಿವೃದ್ಧಿ ಕಾರ್ಯ ಕ್ರಮಗಳಲ್ಲಿ ಅದು ಬಹಳ ಮುಖ್ಯವಾದಂತಹ ವಿಷಯವಾಗಿದೆ. ತಾವು ಹೇಳಿದಂತೆ, ಶೇಕಡಾ 80 ರಷ್ಟು ರೋಜ್‌ಗಾರ್ ಅನುದಾನದಲ್ಲಿ ಕನಿಷ್ಟ ಎಲ್ಲಾ ಗ್ರಾಮ ಪಂಚಾಯಿತಿಗಳು ಎರಡೂವರೆ-ಮೂರು ಲಕ್ಷ ರೂ.ಗಳನ್ನು ಪಡೆಯುತ್ತೇವೆ. ನಾವು ಕೊಡತಕ್ಕಂಥ ಅನುದಾನ 1 ಲಕ್ಷ ರೂ. ಕುಡಿಯುವ ನೀರಿನ ವಿಚಾರದಲ್ಲಿ ಮತ್ತು ಬೇರೆ ಅಭಿವೃದ್ಧಿ ಕಾರ್ಯ ಆಂದರೆ, ಈ ಕರೆಂಟ್ ಬಿಲ್ ಅನ್ನು ಕಟ್ಟುವುದಕ್ಕೆ 1 ಲಕ್ಷ ರೂ. ಕೊಡುತ್ತೇವೆ. ಶೇಕಡ 80 ರಷ್ಟು ಜವಾಹರ್ ರೋಜ್‌ಗಾರ್ ಯೋಜನೆ ಏನಿದೆ, ಅದು ಸ್ವಲ್ಪ ಹೆಚ್ಚುಕಡಿಮೆ ವರ್ಷಕ್ಕೆ ಎರಡರಿಂದ ಮೂರು ಲಕ್ಷ ರೂ.ಗಳವರೆಗೆ ಆಯಾಯ ಜನಸಂಖ್ಯೆಯನ್ನು ಆಧರಿಸಿ ಬರುತ್ತದೆ. ಶೇಕಡ 80 ರಷ್ಟು ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಗೆ ಕೊಡುತ್ತೇವೆ. ಆದರ ಬಗ್ಗೆ ನಾನು ಮಾಹಿತಿ ಕೊಡುತ್ತೇನೆ. ಜವಾಹರ್ ರೋಜ್‌ಗಾರ್ ಯೋಜನೆಯ ಶೇಕಡ 80 ರಷ್ಟು ಭಾಗವನ್ನು ನೇರವಾಗಿ ಗ್ರಾಮ ಪಂಚಾ ಯಿತಿಗಳಿಗೆ ಕಳುಹಿಸಿಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ಜವಾಹರ್ ರೋಜ್‌ಗಾರ್ ಯೋಜನೆ ಪ್ರಕಾರವೇ ಪ್ರತಿ ಪಂಚಾಯಿತಿಗೆ ನೀವು ಒಂದು ಲಕ್ಷ ರೂ. ಗಳನ್ನು ಕೊಡುತ್ತಿದ್ದೀರಿ. ಅದೂ ಅಲ್ಲದೆ ತಲಾ ಅನುದಾನವನ್ನು ಪ್ರಜಾಸಂಖ್ಯೆಗೆ ಅನುಗುಣವಾಗಿ ಕೊಡುತ್ತಿದ್ದಾರೆ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಈಗಾಗಲೇ ಇದರ ಬಗ್ಗೆ ಕ್ಲಾರಿಫೈ ಮಾಡಿದರು.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಹಿರಿಯ ಸದಸ್ಯರಾದಂತಹ ಕಾಗೋಡು ತಿಮ್ಮಪ್ಪನವರಿಗೆ ಎಲ್ಲಾ ಗೊತ್ತಿದೆ. ಅವರು ಈ ರೀತಿ ಕೇಳುತ್ತಿರುವುದಕ್ಕೆ ಅವರಿಗೆ ಬೇರೆ ಏನೋ ಉದ್ದೇಶ ಇರಬೇಕು ಅನ್ನಿಸುತ್ತದೆ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಕನ್‌ವಿನ್ಸ್ ಆಗಿದೆ. ನಾವು ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ಪ್ರತಿ ಗ್ರಾಮ ಪಂಚಾಯಿತಿಗೆ 1 ಲಕ್ಷ ರೂ. ಅನುದಾನ ಕೊಡುತ್ತೇವೆ. ಅದರಲ್ಲಿ ಅವರು ಕುಡಿಯುವ ನೀರಿನ ವಿದ್ಯುಚ್ಛಕ್ತಿ ಬಿಲ್ ಅನ್ನು ಕಟ್ಟಬೇಕಾಗುತ್ತದೆ. ಪಂಚಾಯಿತಿಯಲ್ಲಿ ಕೆಲಸ ಮಾಡುವ ಆಪರೇಟರ್ ಮೊದ ಲಾದಂತಹವರ ಸಂಬಳ ಸಾರಿಗೆ ಕೊಡುವುದಕ್ಕೆ, ಕುಡಿಯುವ ನೀರಿನ ಮೆಂಟೀನನ್ಸ್‌ಗಾಗಿ ಆ ಹಣವನ್ನು ನಾವು ಕೊಡುತ್ತೇವೆ. ಅದು 1 ಲಕ್ಷ ರೂ. ರಾಜ್ಯ ಸರ್ಕಾರ ಕೊಡತಕ್ಕಂಥ ಅನುದಾನ. ಉಳಿದಿರತಕ್ಕಂಥ ಶೇಕಡ 80 ರಷ್ಟು ರೋಜ್‌ಗಾರ್ ಯೋಜನೆಯಲ್ಲಿ ಹಣ ಏನು ಬರುತ್ತದೆ, ಆ ಎರಡೂವರೆ-ಲಕ್ಷ ಮೂರು ಲಕ್ಷ, ಆಯಾ ಜನಸಂಖ್ಯೆಗೆ ಅನು ಗುಣವಾಗಿರತಕ್ಕಂಥದ್ದು ಇದೆ. ಅದನ್ನು ಎರಡು ಅಥವಾ ಮೂರು ವರ್ಷಗಳಲ್ಲಿ ಮಾಡ ಬಹುದು. ಒಂದೇ ವರ್ಷದಲ್ಲಿ ಅಷ್ಟೂ ಹಣವನ್ನು ಕಟ್ಟಬೇಕೆಂದೇನೂ ಇಲ್ಲ. ಶೇಕಡ 25 ರಷ್ಟು ಭಾಗ ಅವರು ಕೊಡತಕ್ಕಂಥದ್ದು, ಶೇಕಡ 25 ಭಾಗದಲ್ಲಿ ಈ ವರ್ಷದಲ್ಲಿ ಒಂದು ಲಕ್ಷಕ್ಕೆ ಪ್ರಾವಿಜನ್ ಮಾಡಿಕೊಳ್ಳಬಹುದು, ಬರುವ ವರ್ಷದಲ್ಲಿ ಮತ್ತೊಂದು ಲಕ್ಷ ಕೊಡಬಹುದು, ಆ ಮೇಲೆ ಶೇಕಡ 25 ರಷ್ಟು ಭಾಗ ತಾಲ್ಲೂಕು ಪಂಚಾಯಿತಿ, ಶೇಕಡ 25 ರಷ್ಟು ಭಾಗ ಸರ್ಕಾರ ಪಾಲು ಇರುತ್ತದೆ. ಈ ಎರಡು ಯೋಜನೆ ಇದಾಗಿದೆ.

ವಿಷಯ :- 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಉದ್ಯೋಗ ಭರವಸೆ ಯೋಜನೆಯ ಅನುಷ್ಠಾನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 209 (1528)

ಶ್ರೀ. ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು?

ಆ) 1995-96 ನೇ ಸಾಲಿನಲ್ಲಿ ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣವೆಷ್ಟು, ಖರ್ಚಾದ ಹಣವೆಷ್ಟು;